ಶ್ರೀ ಕೆ. ಎ. ಶಂಕರಗೌಡ.—ಅಲ್ಲಿ ಓದತಕ್ಕ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಆ ವಿದ್ಯಾರ್ಥಿಗಳ ಹೆಸ್ಕಿ ಎಷ್ಟು ಜನ ಆ ವಿಷಯವನ್ನು ತಮ್ಮ ವಿದ್ಯಾಭ್ಯಾಸದ ಭಾಗವಾಗಿ ಹೊಂದಿದ್ದಾರೆ ಎಂಬುದನ್ನು ನೋಡಿ ತೀರ್ಮಾನಿಸಲಾಗುತ್ತದೆ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಈ ಕಾಲೇಜುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ನೋಡುವುದಾದರೆ ಕನ್ನಡ ಭಾಷೆಯನ್ನು ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಬಹಳ ಹೆಚ್ಚಾಗಿರುವುದರಿಂದ ಈ ಕನ್ನಡ ಅಧ್ಯಾಪಕರ ನೇಮಕವಾಗಬೇಕು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಅದಕ್ಕಾಗಿಯೇ ಒಂದು ಹುದ್ದೆಯನ್ನು ಏರ್ಪಾಡು ಮಾಡಿದ್ದೇವೆ. ಅದನ್ನು ಭರ್ತಿಮಾಡುವುದಕ್ಕೆ ಆಗಿಲ್ಲ, ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಅಡ್ಡಿ ಬಂದಿದೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಪಿ. ರಾಜಣ್ಣ.—ಗವರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಒಂದು ಪ್ರೊಫೆಸರರ ಪೋಸ್ಟ್ ಇದೆ ಎಂದು ಹೇಳಿದಿರಿ. ಅದು ಅಲ್ಲಿಯೇ ಇದೆಯೇ ಅಥವಾ ಬೆಂಗಳೂರು ಯೂನಿವರ್ಸಿಟಿಗೆ ಅದನ್ನು ಟ್ರಾನ್ಸ್‌ಫರ್ ಮಾಡಿದ್ದೀರಾ ?

ಶ್ರೀ ಕೆ. ಎ. ಶಂಕರಗೌಡ.—ಅಲ್ಲಿಯೇ ಇದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಹಾರಾಣಿ ಕಾಲೇಜಿಗೆ ಪ್ರೊಫೆಸರರನ್ನು ನೇಮಕ ಮಾಡುವಾಗ ಹೆಂಗಸರನ್ನು ನೇಮಕ ಮಾಡುವುದರಿಂದ ಅನುಕೂಲವಾಗುತ್ತದೆ ಎಂಬುದು ಗೊತ್ತೆ ?

ಶ್ರೀ ಕೆ. ಎ. ಶಂಕರಗೌಡ.—ಅಂತಹ ಅರ್ಹತೆ ಇರತಕ್ಕವರು ಬಂದರೆ ಅವರನ್ನೇ ನೇಮಕ ಮಾಡಲಾಗುತ್ತದೆ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಈಗ ಸರ್ಕಾರಿ ಕಾಲೇಜುಗಳಲ್ಲಿ ಅಧ್ಯಾಪಕರ ವರ್ಗಾವರ್ಗಿ ಆಗುವಾಗ, ನೇಮಕವಾಗುವಾಗ, ಲಿಂಗ ಮತ್ತು ಜಾತಿ, ಕುಲ, ಬಣ್ಣದ ಮೇರೆ ಮಾಡುತ್ತಾ ಇಲ್ಲ, ಅಲ್ಲವೇ ? ಅವರ ಅರ್ಹತೆಯ ಮೇರೆ ತಾನೆ ಅದು ಆಗುತ್ತಾ ಇರುವುದು ?

ಶ್ರೀ ಕೆ. ಎ. ಶಂಕರಗೌಡ.—ಹೌದು.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ಈ ದೃಷ್ಟಿಯಿಂದ ಹೆಂಗಸರ ಕಾಲೇಜಿಗಾದರೂ ಕೂಡ ಗಂಡಸರು ಅರ್ಹರಾಗಿರತಕ್ಕವರು ಇದ್ದ ಪಕ್ಷದಲ್ಲಿ ಅವರು ಸೀನಿಯಾರಿಟಿ ಪಡೆದಿದ್ದ ಪಕ್ಷದಲ್ಲಿ ಅವರನ್ನು ತಳ್ಳಿಹಾಕಿ ಹೆಂಗಸರು ಎಂಬ ದೃಷ್ಟಿಯಿಂದ ಹೆಂಗಸರ ಕಾಲೇಜಿಗೆ ಹೆಂಗಸರನ್ನೇ ಅಧ್ಯಾಪಕರನ್ನಾಗಿ ನೇಮಕ ಮಾಡುವುದಿಲ್ಲ ಅಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಬರೀ ಹೆಂಗಸರು ಅಂತ ನೇಮಕ ಮಾಡುವುದಕ್ಕಾಗುವುದಿಲ್ಲ; ಅರ್ಹತೆ, ಸೀನಿಯಾರಿಟಿ ಪಡೆದುಕೊಂಡಿದ್ದರೆ ಮಾಡಬೇಕಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.— ಸರ್ಕಾರದವರು ಸದಾ ಕಾಲದಲ್ಲೂ ಯಾವ ಶಿಕ್ಷಕ ವರ್ಗವನ್ನೇ ಆಗಲಿ ಅವರ ದಕ್ಷತೆ ಮತ್ತು ವಿದ್ಯಾ ಅರ್ಹತೆಗಳ ಆಧಾರವನ್ನೇ ಅನ್ವಯಿಸಿ ಅವರನ್ನು ನೇಮಕ ಮಾಡುತ್ತಾರೆಯೇ ಏನಾ ಬೇರೆ ಯಾವ ಅರ್ಹತೆಯನ್ನೂ ಆಧಾರವಾಗಿಟ್ಟುಕೊಳ್ಳುವುದಿಲ್ಲ ಅನ್ನುವುದು ನಿಜವಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಹೌದು.

State Adult Education

40. Sri Y. S. PATIL (Graduates' Constituency).—

Will the Minister for Agriculture and Education be pleased to state :—

(*a*) the net amount spent on State Adult Education Council ;

(*b*) the number of Schools and Libraries that it is running ?

A.—Sri K. V. SHANKARA GOWDA (Minister for Agriculture and Education).—

(*a*) Rs. 10,45,702-26 for the year 1966-67. The grant in-aid depends on the schemes approved. The grant is about Rs. 7.00 lakhs per annum.

(*b*) *Literacy Classes* (*Schools*)	*Libraries*
919	2,650

ಶ್ರೀ ಪ್ಲೆ. ಎಸ್. ಪಾಟೀರ್.—ಈ ಅಡಲ್ಟ್ ಕಾನ್‌ಸಿರ್ ಟ್ರೈನಿಂಗ್ ಕೋರ್ಸಿಗೆ ಸರ್ಕಾರದವರು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ?

ಶ್ರೀ ಕೆ. ವಿ. ಶಂಕರಗೌಡ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಎಂ. ಪಿ. ಎರ್. ಶಾಸ್ತ್ರಿ.—ವಯಸ್ಕರ ವಿದ್ಯಾಶಿಕ್ಷಣದ ಪೀಠಗಳು ಎಷ್ಟು ಎಲ್ಲೆಲ್ಲಿ ಅವು ನಡೆಯುತ್ತಿವೆ, ಅವುಗಳ ಆಚಾರ್ಯರು ಯಾರು? ಅವರ ವಿದ್ಯಾಅರ್ಹತೆಗಳೇನು?

ಶ್ರೀ ಕೆ. ವಿ. ಶಂಕರಗೌಡ.—ಸುಮಾರು 9 ವಿದ್ಯಾಪೀಠಗಳು ಕೆಲಸ ಮಾಡುತ್ತಿವೆ. ಇನ್ನು ಆ ಆಚಾರ್ಯರ ವಿದ್ಯಾ ಅರ್ಹತೆಗೆ ಬಂದರೆ ಅದರಲ್ಲಿ ಬಿ. ಎ.; ಬಿ. ಎಸ್. ಸಿ. ಪಾಸಾದವರೂ ಇದ್ದಾರೆ. ಕೆಲವು ಕೇಸುಗಳಲ್ಲಿ ಸರ್ವೀಸಿನ ಮೇರೆ ಅಷ್ಟು ಹೆಚ್ಚಿನ ವಿದ್ಯಾ ಅರ್ಹತೆಗಳಿಲ್ಲದವರೂ ಇದ್ದಾರೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಅಲ್ಲಿ ನಡೆಯತಕ್ಕ ಆಡಳಿತದ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನ್ನಿನವರೂ ಮತ್ತು ಅಕೌಂಟೆಂಟ್ ಜನರರ್‌ರವರ ಆಫೀಸಿನವರೂ ಕೆಲವು ಆಕ್ಷೇಪಣೆ ಗಳನ್ನೆತ್ತಿರುವುದರ ಬಗ್ಗೆ ಸರ್ಕಾರಕ್ಕೇನಾದರೂ ವರದಿಗಳು ಬಂದಿವೆಯೇ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ದೂರುಗಳು ಬಂದಿವೆ. ಆ ಬಗ್ಗೆ ತನಿಖೆ ನಡೆಯುತ್ತಿದೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಗ್ರಾಮಾಂತರ ಪ್ರದೇಶಗಳಲ್ಲಿ ಪುಸ್ತಕ ಭಂಡಾರಗಳನ್ನು ತೆರೆಯುವುದಕ್ಕೆ ಸರ್ಕಾರದಿಂದ ಗ್ರಾಂಟನ್ನು ಪಡೆದು ಆ ಹಣವನ್ನು ಆ ಕೆಲಸಕ್ಕೆ ಉಪಯೋಗ ಮಾಡದೆ ಆ ಹಣವನ್ನು ಖಜಾನೆಯಲ್ಲಿ ಠೇವಣಾತಿ ಇಟ್ಟಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಜನರಿಗೆ ಜ್ಞಾನಾರ್ಜನೆಯಾಗಲೆಂದು ಸರ್ಕಾರದವರು 76ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಟ್ಟಿದ್ದರೆ ಅದನ್ನು ಆ ಕೆಲಸಕ್ಕೆ ಬಳಸದೆ ಹಣವನ್ನು ಖಜಾನೆಯಲ್ಲಿಟ್ಟು ಬಡ್ಡಿಗಳಿಸುತ್ತಿರುವ ಬಗ್ಗೆ ಸರ್ಕಾರಕ್ಕೇನಾದರೂ ದೂರುಗಳು ಬಂದಿಲ್ಲವೇ? ಅಕೌಂಟೆಂಟ್ ಜನರರ್‌ರವರ ಸಿಬ್ಬಂದಿಯಿಂದ ದೂರು ಬಂದಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ನ್ಯೂನಾತಿರಿಕ್ತಗಳನ್ನು ಅವರು ವರದಿ ಮಾಡಿದ್ದಾರೆ. ಅದನ್ನು ವಿಚಾರ ಮಾಡಲಾಗುತ್ತಿದೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—8 ವಿದ್ಯಾಪೀಠಗಳನ್ನು ನಡೆಸುವುದಕ್ಕೆ ಸರ್ಕಾರದವರು ಕೊಟ್ಟಿರತಕ್ಕ ಗ್ರಾಂಟನ್ನು ಅವರು ಕೇವಲ 5ಕ್ಕೇ ಅದೆಲ್ಲವನ್ನೂ ಉಪಯೋಗ ಮಾಡಿರತಕ್ಕ ಅಕ್ರಮವನ್ನು ತಿಳಿಸಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಆ ಅಕ್ರಮ ನಡೆದಿದೆ ಎಂದು ಅಕೌಂಟೆಂಟ್ ಜನರರ್ ಆಫೀಸಿನವರು ತಿಳಿಸಿದ್ದಾರೆ. ಅದನ್ನು ತನಿಖೆ ಮಾಡಲಾಗುತ್ತಿದೆ.

ಶ್ರೀ ಜೆ. ಬಿ. ಮರ್ಲಾರಾಧ್ಯ.—ಈ ಅಡಲ್ಟ್ ಎಜುಕೇಷನ್ ಕಾನ್‌ಸಿರ್‌ನಿಂದ ಜನರಿಗೇನಾದರೂ ಪ್ರತಿಫಲ ಸಿಕ್ಕುತ್ತಿದೆಯೇ?

ಶ್ರೀ ಕೆ. ವಿ. ಶಂಕರಗೌಡ.—ಇದಕ್ಕೆ ಉತ್ತರ ಹೇಳುವುದು ಬಹಳ ಜಿಜ್ಞಾಸೆಯ ವಿಷಯ. ಆ ಸಂಸ್ಥೆಯವರು ಒಳ್ಳೆಯ ಕೆಲಸವನ್ನೇನೋ ಮಾಡಿದ್ದಾರೆ. ಆದರೆ ಆಡಳಿತ ವಿಭಾಗದಲ್ಲಿ ಲೆಕ್ಕ

(ಶ್ರೀ ಕೆ. ಎ. ಶಂಕರಗೌಡ)

ಪತ್ರಗಳನ್ನು ಇಡತಕ್ಕ ಬಗ್ಗೆ ಕೆಲವು ತಪ್ಪುಗಳನ್ನು ಮಾಡಿದ್ದಾರೆ. ಇಲ್ಲಿ ಈ ಸಂಸ್ಥೆ ಮಾಡಿರತಕ್ಕ ಕೆಲಸವನ್ನು ನೋಡಿ ಪಾಶ್ಚಿಮಾತ್ಯ ದೇಶದವರೂ ಕೂಡ ಮೆಚ್ಚಿಕೊಂಡಿದ್ದಾರೆ. ಇಲ್ಲಿ ಹಣವನ್ನು ಖರ್ಚುಮಾಡಿದ ಬಗ್ಗೆ ಪ್ರತಿಫಲವಿಲ್ಲ ಅಂತ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಇದೊಂದು ಲೇವಾದೇವಿ ನಡೆಸತಕ್ಕ ಸಂಸ್ಥೆಯಾಗಿದೆ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಹಾಗೇನೂ ಆಗಿಲ್ಲ. ಹಾಗಾಗುವುದಕ್ಕೆ ಅವಕಾಶವೂ ಇಲ್ಲ.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಇದರ ಮೇಲರತಕ್ಕ ಸಾಲ ಹೊರೆಯೆಷ್ಟು ಹೇಳುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಆ ವಿವರಗಳು ನನ್ನಲ್ಲಿ ಈಗಿಲ್ಲ.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಅವರಿಗೆ ಹಾಗೆ ಸಾಲ ಮಾಡಲು ಯಾರು ಅಧಿಕಾರ ಕೊಟ್ಟರು ?

ಶ್ರೀ ಕೆ. ಎ. ಶಂಕರಗೌಡ.—ಹಾಗೆ ಅವರಿಗೆ ಯಾರೂ ಆ ಅಧಿಕಾರವನ್ನು ಕೊಟ್ಟಿಲ್ಲ.

ಶ್ರೀ ವೈ. ಎಸ್. ಪಾಟೀಲ್.—ಈ ಸಂಸ್ಥೆಗೆ 1964—65ನೆಯ ಸಾಲಿಗೆ ಒದಗಿಸಿದ್ದ ಬಡ್ಜೆಟ್ ಗಿಂತ ಹೆಚ್ಚಾಗಿ 17 ಸಾವಿರ ರೂಪಾಯಿಗಳನ್ನು ಅವರು ಪಡೆದಿಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಲೆಕ್ಕಪತ್ರಗಳಲ್ಲಿ ದೋಷವಿದೆ ಎಂದು ನಾನಾಗಲೇ ಹೇಳಿದ್ದೇನೆ.

ಶ್ರೀ ವೈ. ಎಸ್. ಪಾಟೀಲ್.—ಅಲ್ಲಿ ಏನೂ ಪಾಸಾಗದವರು ಪ್ರಿನ್ಸಿಪಾಲರಾಗಿಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಯಾವ ಪರೀಕ್ಷೆಯನ್ನೂ ಪಾಸಾಗದವರಲ್ಲ, ಎಸ್.ಎಸ್.ಎಲ್.ಸಿ. ಪಾಸಾದವರೊಬ್ಬರು ಪ್ರಿನ್ಸಿಪಾಲರಾಗಿದ್ದಾರೆ.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಡೆನ್ಮಾರ್ಕ್‌ನಿಂದ ಬಂದಿದ್ದವರು ಇದಕ್ಕೆ 2 ಕಾರುಗಳನ್ನು ಕೊಟ್ಟಿದ್ದರೆ ಅವುಗಳನ್ನು ಸಹಾ ಇವರು ಮಾರಾಟ ಮಾಡಿಕೊಂಡಿರುವುದು ನಿಜವೇ ?

ಶ್ರೀ ಕೆ. ಎ. ಶಂಕರಗೌಡ.—ಆ ಪ್ರಶ್ನೆ ಇಲ್ಲಿ ಹೇಗೆ ಉದ್ಭವವಾಗುತ್ತದೆ ?

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಸರ್ಕಾರಕ್ಕೆ ಬರಬೇಕಾದ ಸಹಸ್ರಾರು ರೂಪಾಯಿಗಳ ಎಕ್ಸೈಸ್ ಡ್ಯೂಟಿಯನ್ನು ಕೂಡ ಮನ್ನಾ ಮಾಡಿ ಆ ಕಾರನ್ನು ಇವರಿಗೆ ಕೊಡಿಸಲಾಯಿತು. ಅದನ್ನೂ ಕೂಡ ಮಾರಾಟ ಮಾಡಿಕೊಂಡಿದ್ದಾರೆ. ಇವರು ಹೀಗೆ ಅಲ್ಲಿ ಮಾಡುತ್ತಿರುವ ಕೆಲಸಗಳನ್ನು ನೋಡಿದರೆ ನಾವುಗಳು ಯಾರೂ ತಲೆಯೆತ್ತಿಕೊಂಡು ತಿರುಗುವಂತಿಲ್ಲ ಅನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಅದಕ್ಕಾಗೇ ಅಲ್ಲಿ ಒಂದು ಸ್ಕ್ವಾಯಿಚುಟೆರಿ ಬಾಡಿಯನ್ನು ಆದಷ್ಟು ಬೇಗ ನೇಮಿಸಲಾಗುತ್ತದೆ.

ಶ್ರೀ ವೈ. ಎಸ್. ಪಾಟೀಲ್.—ದಿನವಹಿ ಖರ್ಚಿಗಾಗಿ ಅಲ್ಲಿ ಅವರು 86ಸಾವಿರ ರೂಪಾಯಿಗಳ ಪ್ರಾವಿಡೆಂಟ್‌ಫಂಡನ್ನೂ ಕೂಡ ಖರ್ಚುಮಾಡಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ದಿನವಹಿ ಖರ್ಚಿಗಾಗಿ ಅದನ್ನು ವೆಚ್ಚಮಾಡಿದ್ದು ಸರಿಯಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಆ ಬಾಡಿಯ ಮೇರೆ ಈ ಶಾಸನ ಸಭೆಗಳಿಗೆ ಯಾವ ಅಧಿಕಾರವೂ ಇಲ್ಲದಿರಲಿ ಎಂದು ತಾವು ಅದನ್ನು ಒಂದು ಸ್ಕ್ವಾಯಚುಟೆರಿ ಬಾಡಿಯನ್ನಾಗಿ ಮಾಡಬೇಕೆಂದು ಯೋಚಿಸಿದ್ದೀರಾ ?

ಶ್ರೀ ಕೆ. ಎ. ಶಂಕರಗೌಡ.—ಅದನ್ನು ಒಂದು ಆಟಾನಮಸ್ ಬಾಡಿಯಾಗಿ ಮಾಡಬೇಕೆಂದು ಮಾಡಲಾಯಿತು ; ಅಷ್ಟೇ.

ಶ್ರೀ ಜೆ. ಬಿ. ಮುರ್ಳಾರಾಧ್ಯ.—ಆ ಸಂಸ್ಥೆಯ ಸೆಕ್ರೆಟೆರಿಗಳು ಆ ಕಾರುಗಳನ್ನು ತಿರುಪತಿಗೂ ಮತ್ತು ತಮ್ಮ ಅಣ್ಣನ ಮಗನ ಮಗಳ ಮದುವೆಗೂ ಉಪಯೋಗಿಸಲು ಅದನ್ನು ಕೊಡಲಾಗಿತ್ತೆ ?

ಶ್ರೀ ಕೆ. ಎ. ಶಂಕರಗೌಡ.—ಆ ವಿಚಾರವಾಗಿ ನನಗೇನೂ ದೂರುಗಳು ಬಂದಿಲ್ಲ. ಮಾನ್ಯ ಸದಸ್ಯರು ನನಗೆ ಆ ಬಗ್ಗೆ ಮಾಹಿತಿ ಕೊಟ್ಟರೆ ನಾನು ಆ ಬಗ್ಗೆ ಸೂಕ್ತ ಕಾರ್ಯಕ್ರಮವನು ಕೈಗೊಳ್ಳುತ್ತೇನೆ.